2. ವಸತಿಗೃಹಗಳು

1.	ಲೋಕೋಪಯೋಗಿ ಇಲಾಖೆ ವಸತಿಗೃಹಗಳು	6.94	37	14.51	14	6.00	9
2.	ಕೆ.ಎಚ್.ಬಿ. ವಸತಿ ಗೃಹಗಳು	0.15	1	0.79	2	–	1
3.	ಜಿಲ್ಲಾಧಿಕಾರಿಗಳ ವಸತಿಗೃಹ	1.75	7	3.75	4	3.00	2
4.	ಆರ್.ಎಚ್.ಎಸ್. ವಸತಿಗೃಹ	1.81	3	1.00	2	–	–
5.	ನ್ಯಾಯಾಂಗ ವಸತಿಗೃಹ	2.05	10	6.25	5	4.00	3
6.	ಪೋಲೀಸ್ ವಸತಿಗೃಹ	0.75	4	0.85	2	–	–
7.	ಅಗ್ನಿಶಾಮಕ ವಸತಿಗೃಹ	–	–	0.75	2	–	–
	ಒಟ್ಟು	**13.45**	**62**	**27.90**	**31**	**13.00**	**15**

ಜೊಯಿಡಾ ತಾಲ್ಲೂಕಿನ ಜೊಯಿಡಾ ಲೋಕೋಪಯೋಗಿ ಇಲಾಖೆ ಉಪ ವಿಭಾಗದಲ್ಲಿ ವಿವಿಧ ಇಲಾಖೆಗಳ ಸರ್ಕಾರಿ ಕಛೇರಿಗಳಿಗೆ/ವಸತಿಗೃಹಗಳಿಗೆ ಆದ ಅಂದಾಜು ವೆಚ್ಚದ ವಿವರಗಳು

ಕ್ರ. ಸಂ.	ಇಲಾಖೆಗಳು	ಅಂದಾಜು ವೆಚ್ಚದ ವಿವರ (ರೂ.ಲಕ್ಷಗಳಲ್ಲಿ)					
		2001–02		2002–03		2003–04	
		ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ
1.	ಲೋಕೋಪಯೋಗಿ ಇಲಾಖೆ	1.00	2	–	–	–	–
2.	ಪೋಲೀಸ್ ಇಲಾಖೆ	1.00	2	–	–	–	–
3.	ಕಂದಾಯ ಇಲಾಖೆ	0.70	3	0.75	1	–	–
	ಒಟ್ಟು	**2.70**	**7**	**0.75**	**1**	–	–

2. ವಸತಿಗೃಹಗಳು

1.	ಲೋಕೋಪಯೋಗಿ ಇಲಾಖೆ ವಸತಿಗೃಹಗಳು	4.00	8	10.00	11	–	–
2.	ಪೋಲೀಸ್ ಇಲಾಖೆ	2.00	4	–	–	–	–
3.	ಕಂದಾಯ ಇಲಾಖೆ	1.00	2	–	–	–	–
	ಒಟ್ಟು	**7.00**	**14**	**10.00**	**11**	–	–

2077 (1862) ಶ್ರೀ ಗೋಪಾಲಕೃಷ್ಣ ಎನ್.ವೈ. (ಮೊಳಕಾಲ್ಮೂರು): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ಕ್ಷೇತ್ರದ ನಾಯಕನಹಟ್ಟಿ ಹಾಗೂ ತಳಿರು ಹೋಬಳಿಗಳಲ್ಲಿ ಲಭ್ಯವಿರುವ ಸರ್ಕಾರಿ ಗೋಮಾಳ ಜಮೀನಿನ ವಿಸ್ತೀರ್ಣ ಎಷ್ಟು; (ವಿವರಗಳನ್ನು ಒದಗಿಸುವುದು);

ಆ) ಈ ಜಮೀನಿನಲ್ಲಿ ಬಗರ್ ಹುಕುಂ ಮಾಡುತ್ತಿರುವ ಜಮೀನಿನ ವಿಸ್ತೀರ್ಣವೆಷ್ಟು; (ಬಗರ್ ಹುಕುಂದಾರರ ವಿವರ ನೀಡುವುದು);

ಇ) ಇದನ್ನು ಸಕ್ರಮಗೊಳಿಸಲಾಗುವುದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

		ಎಕರೆ.ಗುಂಟೆ
ಅ)	ನಾಯಕನಹಟ್ಟಿ ಹೋಬಳಿ	7238.00
	ತಳಕು ಹೋಬಳಿ	3520.25
	ಒಟ್ಟು	**10,758.25**

ಆ) ಒಟ್ಟು 10,758.25 ಎಕರೆ

ಬಗರ್ ಹುಕುಂ ಮಾಡುತ್ತಿರುವ ಜಮೀನಿನ ವಿಸ್ತೀರ್ಣ ಈ ಕೆಳಕಂಡಂತಿದೆ.

ಕ್ರ. ಸಂ.	ಹೋಬಳಿ	ಪ.ಜಾ. ಎ.ಗುಂ.	ಪ.ಪಂ. ಎ.ಗುಂ.	ಇತರೆ ಎ.ಗುಂ.	ಒಟ್ಟು ಸಕ್ರಮೀಕರಣವಾದ	ಸಕ್ರಮೀಕರಣ ಗೊಳಿಸಲು ಬಾಕಿ
1.	ನಾಯ್ಕನಹಟ್ಟಿ	303.09	1002.24	123.09	1429.02	5808.38
2.	ತಳಕು	395.35	799.20	432.33	1628.08	1892.17
	ಒಟ್ಟು	**699.04**	**1802.04**	**556.02**	**3057.10**	**7701.15**

ಇ) ಅಕ್ರಮ ಸಕ್ರಮ ಸಮಿತಿಗಳ ರಚನೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿ ಸದರಿ ಸಮಿತಿಗಳು ರಚನೆಯಾದನಂತರ ಅವುಗಳನ್ನು ಸಮಿತಿಗಳ ಮುಂದೆ ಮಂಡಿಸಿ ಇತ್ಯರ್ಥವಾಗದೇ ಬಾಕಿ ಇರುವ ಪ್ರಕರಣಗಳನ್ನು ವಿಲೇ ಪಡಿಸಲು ಕ್ರಮ ತೆಗೆದುಕೊಳ್ಳುವುದು.

2078 (1929) ಶ್ರೀ ಗೋಪಾಲಕೃಷ್ಣ ಎನ್.ವೈ. (ಮೊಳಕಾಲ್ಮೂರು): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂದಾಯ ದಾಖಲಾತಿಗಳನ್ನು ಪಡೆಯಲು ಗಣಕೀಕರಣಗೊಳಿಸಿದ್ದರೂ ಸಾರ್ವಜನಿಕರಿಗೆ ಅದರಲ್ಲೂ ಮುಖ್ಯವಾಗಿ ಹಳ್ಳಿಯ ಜನರು ಪಡೆಯುವಲ್ಲಿ ತೊಂದರೆ ಅನುಭವಿಸುತ್ತಿರುವುದನ್ನು ತಪ್ಪಿಸಲು ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) 'ಭೂಮಿ'–ಭೂ ದಾಖಲೆಗಳ ಗಣಕೀಕರಣ ಯೋಜನೆಯನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಗ್ರಾಮ ಮಟ್ಟಕ್ಕೆ ವಿಕೇಂದ್ರಿಕರಿಸಲಾಗಿದೆ. ಅದರಿಂದ ಹಳ್ಳಿಯ ಜನರು ತಮ್ಮ ಭೂ ದಾಖಲೆಗಳನ್ನು ಪಡೆಯಲು ತಾಲ್ಲೂಕು ಕಛೇರಿಗೆ ಹೋಗುವುದನ್ನು ತಪ್ಪಿಸಿದಂತಾಗುತ್ತದೆ.